ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಎಂ.ಎ. ಪದವಿಯ 4ನೇ
ಸೆಮಿಸ್ಟರ್‌ಗಾಗಿ ಒಪ್ಪಿಸಲಾದ ಸಂಶೋಧನಾ ಪ್ರಬಂಧ ಸ್ನಾತಕೋತ್ತರ ಪದವಿ


ಸಂಶೋಧನಾ ವಿದ್ಯಾರ್ಥಿ : ಚಂದ್ರಿಕಾ ಗೋಪಾಲಕೃಷ್ಣ ಕಂಚುಗಾರ

ರ.ಜಿ.ನಂ : **P02JK21A0001**

ಸಂಶೋಧನಾ ಮಾರ್ಗದರ್ಶಕರು : ಪ್ರೋ. ಆರ್. ಎಸ್. ನಾಯಕ

ಸಹಾಯಕ ಪ್ರಾಧ್ಯಾಪಕರು : ಕನ್ನಡ ವಿಭಾಗ

ಅಂಜುಮಾನ್ ಕನ್ನಡ ಸ್ನಾತಕೋತ್ತರ ಕೇಂದ್ರ, ಭಟ್ಕಳ (ಉ.ಕ.)

ಪ್ರಾಂಶುಪಾಲರು: ಎಂ.ಎ. ಶೇಖ್

ಅಂಜುಮಾನ್ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ

ಹಾಗೂ ಸ್ನಾತಕೋತ್ತರ ಕೇಂದ್ರ

ಭಟ್ಕಳ, ಉತ್ತರ ಕನ್ನಡ–581320


**ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡ**

**ಅಕ್ಟೋಬರ್– 2023**


ANJUMAN ARTS, SCIENCE & COMMERCE COLLEGE
BHATKAL
581320
(U.K.)



Scanned with OKEN Scanner

# ಪ್ರಮಾಣ ಪತ್ರ

**"ಶ್ರೀ ಮುರುಡೇಶ್ವರ ಕ್ಷೇತ್ರ ಮಹಿಮೆ"** ಎಂಬ ಕಿರು ಸಂಶೋಧನಾ ಪ್ರಬಂಧವನ್ನು ಚಂದ್ರಿಕಾ ಜಿ. ಕಂಚುಗಾರ ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ **"ಡಾ॥ ಆರ್. ಸಿ ಹೀರೆಮಠ ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯಕ್ಕೆ"** ಸಾದರಪಡಿಸಿದ್ದಾರೆ. ಪ್ರಸ್ತುತ ಪ್ರಬಂಧ ಈ ಮೊದಲು ಇಡಿಯಾಗಿ ಇಲ್ಲವೆ ಬಿಡಿಯಾಗಿ ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಭಟ್ಕಳ

ದಿನಾಂಕ :

Chandrika

ಸಂಶೋಧನಾ ವಿದ್ಯಾರ್ಥಿನಿ

ಚಂದ್ರಿಕಾ ಜಿ. ಕಂಚುಗಾರ

**ಮಾರ್ಗದರ್ಶಕರು**

ಪ್ರೊ॥ ಆರ್. ಎಸ್. ನಾಯಕ

ಕನ್ನಡ ವಿಭಾಗದ ಮುಖ್ಯಸ್ಥರು

ಅಂಜುಮಾನ್ ಸ್ನಾತಕೋತ್ತರ

ಕೇಂದ್ರ ಭಟ್ಕಳ (ಉ.ಕ)

PRINCIPAL

Anjuman Arts, Science & Commerce College

& P.G. Centre

BHATKAL-581 320

# ಪರಿವಿಡಿ


| ಅ.ನಂ | ಅಧ್ಯಾಯ | ವಿಷಯ | ಪುಟ ನಂ. |
| --- | --- | --- | --- |
| 1 | ಅಧ್ಯಾಯ–೧ | ಅಧ್ಯಾಯನದ ಉದ್ದೇಶ ಮತ್ತು ವ್ಯಾಪ್ತಿ | 1–2 |
| 2 | ಅಧ್ಯಾಯ–೨ | ಮುರುಡೇಶ್ವರದ ಭೌತಿಕ ಕ್ಷೇತ್ರ ಪರಿಚಯ | 3–12 |
| 3 | ಅಧ್ಯಾಯ–೩ | ಮುರುಡೇಶ್ವರ ದೇವಾಲಯದ ಇತಿಹಾಸ | 13–17 |
| 4 | ಅಧ್ಯಾಯ–೪ | ಧಾರ್ಮಿಕ ಶ್ರದ್ಧಾ ಕೇಂದ್ರವಾಗಿ ಮುರುಡೇಶ್ವರ | 18–22 |
| 5 | ಅಧ್ಯಾಯ–೫ | ಮುರುಡೇಶ್ವರದ ಪರಿವಾರ ದೇವರುಗಳು | 23–26 |
| 6 | ಅಧ್ಯಾಯ–೬ | ಮುರುಡೇಶ್ವರ ದೇವಾಲಯದ ಆಡಳಿತ ವ್ಯವಸ್ಥೆ | 27 |
| 7 | ಅಧ್ಯಾಯ–೭ | ಪ್ರವಾಸೋದ್ಯಮ ಕೇಂದ್ರವಾಗಿ ಮುರುಡೇಶ್ವರ ಬೆಳೆದ ಬಗೆ | 28–29 |
| 8 | ಅಧ್ಯಾಯ–೮ | ಉಪಸಂಹಾರ | 30 |
| 9 | ಅಧ್ಯಾಯ–೯ | ಅನುಬಂಧಗಳು<br>ಅನುಬಂಧ ೧<br>ಫೋಟೋಗಳು<br>ಅನುಬಂಧ ೨ ಆಧಾರಗಳು ಗ್ರಂಥಗಳು<br>ಮಾಹಿತಿ ಮೂಲ ವ್ಯಕ್ತಿಗಳು | 31–37 |


Scanned with OKEN Scanner

# ಅಧ್ಯಾಯ–1

## ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಜಗತ್ತಿನ ಅತ್ಯಂತ ಸುಂದರ ಜಿಲ್ಲೆಗಳಲ್ಲಿ ಉತ್ತರ ಕನ್ನಡವೂ ಒಂದು. ಕರ್ನಾಟಕದ ಕಾಶ್ಮೀರ ಎಂದು ಕರೆಯಲ್ಪಡುವ ಉತ್ತರ ಕನ್ನಡ ಜಿಲ್ಲೆ ನಿಸರ್ಗ ರಮಣೀಯ ತಾಣ. ಚೆಲುವಿನ ಬೀಡು. ಕವಿ ಹೃದಯಕ್ಕೆ ಸ್ಪಂದನ ನಿಡಬಲ್ಲ ಸ್ವಾಬಾವಿಕವಾದ ಪರಿಸರ ಈ ಜಿಲ್ಲೆಯಲ್ಲಿದೆ. ಈ ಜಿಲ್ಲೆಯ ಇತಿಹಾಸ, ಭೂಗೋಳ, ಸಂಸ್ಕೃತಿ, ಜನಜೀವನ, ಸಂಪ್ರದಾಯ, ಧಾರ್ಮಿಕ ಜೀವನಗಳು, ಅಪಾರ ವೈವಿಧ್ಯತೆಯಿಂದ ಕೂಡಿದ್ದು, ಶ್ರೀಮಂತವಾಗಿದೆ. ಹಾಗೆಯೇ ಹಲವು ಸಂಸ್ಕೃತಿಗಳ ವೈವಿಧ್ಯಮಯ ಬದುಕನ್ನು ತನ್ನೊಡಲಲ್ಲಿ ಕಾದಿಟ್ಟುಕೊಂಡು ಬೆಳೆಯುತ್ತಿರುವ ಬೀಡು ಈ ಕರಾವಳಿ.

ಕ್ಷೇತ್ರಾಧಿಶ್ವರನಾದ ಶ್ರೀ ಮೃಡೇಶ್ವರನ ಪರಿವಾರವಾಗಿ ಶ್ರೀಗಣಪತಿ ಗೌರಿ–ದತ್ತಾತ್ರೇಯ–ಸುಬ್ರಹ್ಮಣ್ಯ–ಆಂಜನೇಯ–ನವಗ್ರಹ–ನಾಗವಗ್ಯೆರೆ ದೇವಮಂದಿರಗಳಿವೆ. ಎದುರಿಗೆ ನಂದೀ ಮಂಟಪವೂ ಧ್ವಜಗಂಬವೂ ಅಲ್ಲಲ್ಲಿ ಬಲಿ ಕಲ್ಲುಗಳೂ ಇವೆ. ಹೊರಗಡೆ ಬಾಗಿಲ ಜಟಿಗನ ಗುಡಿ ಮತ್ತು ಅಶ್ವತ್ಥ ಕಟ್ಟೆಯೂ ಇದೆ. ದೇವಸ್ಥಾನದ ಪ್ರಾಕಾರದಲ್ಲಿ ಯಜ್ಞ ಮಂಟಪವಿದ್ದು ರಥೋತ್ಸವ ಕಾಲದಲ್ಲಿ ಅಲ್ಲಿ ಪಂಚಕುಂಡೀ ವಿಧಾನದಿಂದ ಹೋಮ ಹವನಾದಿಗಳು ಭಜಕರ ರುದ್ರಹವನ ಮೊದಲಾದವುಗಳು ನಡೆಯುತ್ತದೆ.

ಪ್ರತಿಷ್ಠಾದಿ ವಿಶೇಷ ಕಾರ್ಯದಲ್ಲಿ ಹೋಮ ಹವನಾದಿಗಳು ಭಜಕರ ರುದ್ರಹವನ ಮೊದಲಾದವುಗಳು ನಡೆಯುತ್ತವೆ. ನಿತ್ಯ ನೈಮಿತ್ತಕ, ವಿಶೇಷ ಪೂಜಾ ವಿನಿಯೋಗ, ಉತ್ಸವಾದಿಗಳನ್ನು ನಡೆಸಲು ಅರ್ಚಕರ ವರ್ಗವಿದೆ. ಭಜಕರಿಂದಾಗುವ ಸೇವಾದಿಗಳನ್ನು ಅರ್ಚಕರೂ ಮತ್ತು ಉಪಾಧಿವಂತರೂ ಪೂರೈಸುತ್ತಾರೆ. ಈ ಉಪಾಧಿತರಿಗೆ ನಿತ್ಯ ನಿಯಮಿತ ದೇವತಾ ಕಟ್ಟಳೆ ವಿನಿಯೋಗಗಳು ಇವೆ. ಶ್ರೀ ದೇವರ ವಿನಿಯೋಗಕ್ಕೆ ಬೇಕಾದ ನೀರು ತಂದುಕೊಡಲು, ಗಂಧ ಪತ್ರ–ಪುಷ್ಪಾಧಿ ಸಲಕರಣೆಗಳನ್ನು ನೈವೇದ್ಯವನ್ನೂ ತಯಾರಿಸಿ ಕೊಡಲು ಪರಿಚಾರಕನು ಇದ್ದಾನೆ. ಇವನಿಗೆ ಕೀಳುಶಾಂತಿ ಎಂದು ಹೇಳುವ ರೂಢಿ. ಇದು ಕೇರಳಿಯ ಹೆಸರು. ಅಲ್ಲಿ ಅರ್ಚಕರಿಗೆ ಮೇಲುಶಾಂತಿ, ಪರಿಚಾರಕರಿಗೆ ಕೀಳುಶಾಂತಿ ಎಂದು ಕರೆಯುವ ಸಂಪ್ರದಾಯವಿದೆ.



Scanned with OKEN Scanner

# ಅಧ್ಯಾಯ-8

## ಉಪಸಂಹಾರ

ಶ್ರೀ ಮುರುಡೇಶ್ವರ ದೇವಾಲಯವನ್ನು ನಿರ್ಮಿಸಿರುವ ಉದ್ಯಮಿಯಾದ ಶ್ರೀಯುತ ಆರ್. ಎನ್. ಶೆಟ್ಟಿಯವರು ಈ ದೇವಾಲಯ ನಿರ್ಮಾಣಕ್ಕೆ ಆರ್ಥಿಕ ಸಹಕಾರ ನೀಡಿದ್ದಾರೆ. ಶಿವನ ಈ ಪ್ರತಿಮೆ ಮೇಲೆ ಸೂರ್ಯನ ಕಿರಣಗಳು ನೇರವಾಗಿ ಬಿದ್ದು ಸಾರ್ವಕಾಲಿಕವಾಗಿ ಪ್ರತಿಮೆ ಹೊಳೆಯುವಂತೆ ನಿರ್ಮಿಸಲಾಗಿದ್ದು ಸರಿಸುಮಾರು ಇದನ್ನು ನಿರ್ಮಿಸಲು 2 ವರ್ಷ ತೆಗೆದುಕೊಂಡಿದೆ ಎನ್ನಲಾಗುತ್ತದೆ. ಶಿವನ ಪ್ರತಿಮೆಯ ಕೆಳಗಿರುವ ಭೂ ಕೈಲಾಸ ಗುಹೆಯಲ್ಲಿ ಭೂಮಿಯ ಮೇಲೆ ಶಿವನ ಆತ್ಮಲಿಂಗ ಪ್ರತಿಷ್ಠಾಪನೆ ಆದ ಪೌರಾಣಿಕ ಕತೆಯನ್ನು ಪ್ರತಿಮೆಗಳ ಮೂಲಕ ಮನೋಹರವಾಗಿ ವಿವರಿಸಲಾಗಿದೆ. ಸುಂದರ ಪ್ರತಿಮೆಗಳು ಗತಕಾಲದ ಘಟನೆಗಳಿಗೆ ಜೀವ ತುಂಬುವಂತಿದೆ. ಭೂಮಿ ಕೈಲಾಸವಾದ ಬಗೆಯನ್ನು ವಿವರಿಸಿದೆ. ಮೂರು ಕಡೆಯಿಂದಲೂ ಅರಬ್ಬೀ ಸಮುದ್ರದಿಂದ ಸುತ್ತುವರೆಯಲ್ಪಟ್ಟ ಈ ದೇವಾಲಯ ನಯನ ಮನೋಹರವಾಗಿದೆ. ಸಮುದ್ರದಲ್ಲಿ ಜಲಕ್ರೀಡೆ ಆಡುವುದೇ ಒಂದು ಸುಂದರ ಅನುಭವ.

ಒಟ್ಟಾರೆ ಆಧುನಿಕ ಹಾಗೂ ಸಾಂಪ್ರದಾಯಿಕ ವಾಸ್ತುಶಿಲ್ಪದ ಮಿಶ್ರಣ ಹೊಂದಿದ ಈ ಮುರುಡೇಶ್ವರ ಕ್ಷೇತ್ರ ಧಾರ್ಮಿಕ ಕ್ಷೇತ್ರವಷ್ಟೇ ಅಲ್ಲದೇ ಪ್ರವಾಸಿ ತಾಣವೂ ಆಗಿದೆ. ಈ ಕ್ಷೇತ್ರಕ್ಕೆ ಭೇಟಿ ನೀಡಿಯೇ ಇಲ್ಲಿಯ ಸೌಂದರ್ಯವನ್ನು ಕಣ್ತುಂಬಿಕೊಳ್ಳಬೇಕು.



Scanned with OKEN Scanner